‘ಹಿತೇಶನ ಬಗ್ಗೆ ಕಾಕುಟ್ಟನಿಗೆ ವಿಷಯ ತಿಳಿಸಿದೆ’

‘ಅದರಿಂದ ಆಗಿರೋ ತಪ್ಪೇನು?’

‘ಹಿತೇಶನ ಬಗ್ಗೆ ಮಾತ್ರವಲ್ಲ ಲಹರಿ ಮತ್ತು ಹಿತೇಶನಿಗಿರೋ ಸಂಬಂಧದ ಬಗೆಯೂ ಹೇಳಿದೆ. ಇದರಿಂದ ಕಾಕುಟ್ಟನೇನಾದರೂ ಹಿತೇಶನಿಗೆ ಅಪಾಯ ತಂದೊಡ್ಡಿದ್ದಾನೆಯೆ ಅನ್ನುವ ಭಯ ನನಗೆ’

‘ಅದಕ್ಕೆ ನೀನು ಭಯಪಡುವ ಅವಶ್ಯಕತೆ ಏನು?’

‘ಪೊಲೀಸರಿಗೆ ನನ್ನ ಮೇಲೆ ಅನುಮಾನವಿದೆ. ಹಿತೇಶನ ಪತ್ತೆಯಾಗದಿದ್ದರೆ ನಾನು ತಪ್ಪಿತಸ್ಥ ಆಗ್ತೀನಿ’

‘ಅದು ಹೇಗೆ ಸಾಧ್ಯ? ಪೊಲೀಸರಿಗೆ ನೀನು ಇದ್ದ ವಿಷಯ ಹೇಳಿ ಬಿಡು’

‘ಅಂದ್ರೆ, ನಾನು ಕಾಕುಟ್ಟನಿಗೆ ಹಿತೇಶ ಬಗ್ಗೆ ತಿಳಿಸಿದ ವಿಷಯವನ್ನು ಪೊಲೀಸರಿಗೆ ತಿಳಿಸ್ಬೇಕೂಂತ ಹೇಳ್ತೀಯಾ?’

‘ಹೌದು, ಆಗ ನೀವು ಬಚಾವಾಗುವೆ. ಇಲ್ಲದಿದ್ದರೆ ನೀನ್ನೇ ಪೊಲೀಸರು ಅನುಮಾನದ ದೃಷ್ಟಿಯಿಂದ ನೋಡುತ್ತಾರೆ. ಅದಕ್ಕೆ ನಾನು ನಿನ್ನ ಹೇಳ್ತಿರೋದು, ಹಿತೇಶನನ್ನು ಪೊಲೀಸರಿಗೆ ಒಪ್ಪಿಸಿ ಬಿಡೂಂತ. ನೀನು ಹಣದ ಆಸೆಗೆ ಬಲಿಯಾದೆ. ಈಗ ಅತ್ತ ಹಣವೂ ಇಲ್ಲ; ಇತ್ತ ಹಿತೇಶನೂ ಇಲ್ಲ. ಕೊನೆಗೆ ನಿನಗೆ ನೆಮ್ಮದಿಯೂ ಇಲ್ಲ’

ಪಾಂಬು ತಲೆ ಕೆಳಗೆ ಹಾಕಿ ಚಿಂತಿಸುತ್ತಾ ಕುಳಿತ.

ಮುತ್ತುಚಾಂಡಿ ಹೊರಟು ನಿಂತಾಗ ಪಾಂಬು ಅವನನ್ನು ನೋಡಿದ. ಮುತ್ತುಚಾಂಡಿ ಅವನನ್ನು ಅರ್ಥೈಸಿಕೊಂಡಿದ್ದ.

‘ಪಾಂಬು, ನಂಜೊತೆ ಹೊರಡು. ಅಗತ್ಯವಾಗಿ ಢಾಬಾಕ್ಕೆ ಈ ಮೀನುಗಳನ್ನು ತಲುಪಿಸಬೇಕಿದೆ. ಅಲ್ಲಿಂದ ಮುಂದೆ ಏನೂಂತ ನೋಡೋಣ’

ಪಾಂಬುವನ್ನು ಹೊರಡುವಂತೆ ಸೂಚಿಸಿದ ಮುತ್ತುಚಾಂಡಿ ಮೀನಿನ ಚೀಲವನ್ನು ಕೈಗೆತ್ತಿಕೊಂಡ. ಪಾಂಬು ಎದ್ದು ಹೊರಗೆ ಬಂದು ನಿಂತ. ಮುತ್ತುಚಾಂಡಿ ಬೀಗದ ಕೀಲಿಯನ್ನು ತೆಗೆದು ಬೀಗ ಜಡಿದು ಮೆಟ್ಟಿಲಿಳಿಯುವಾಗ ಪಾಂಬು ಸೋತ ಹೆಜ್ಜೆಯೊಂದಿಗೆ ಅವನನ್ನು ಹಿಂಬಾಲಿಸಿದ. ಪಾಂಬು ಕಾರನ್ನು ಓಡಿಸುವ ಸ್ಥಿತಿಯಲ್ಲಿ ರಲಿಲ್ಲ. ಮುತ್ತುಚಾಂಡಿಗೆ ಸೀಟು ಬಿಟ್ಟು ಕೊಟ್ಟು ಪಕ್ಕದಲ್ಲಿ ಕುಳಿತ. ಕಾರು ಚಾಲನೆಗೆ ತಂದ ಮುತ್ತುಚಾಂಡಿ ಕಾರನ್ನು ವೇಗವಾಗಿ ಢಾಬಾದತ್ತ ಓಡಿಸಿದ. ಕಾರು ಅರ್ಧಗಂಟೆಯಲ್ಲಿಯೇ ಢಾಬಾದ ಎದುರು ನಿಂತಿತು.

ಇಬ್ಬರೂ ಇಳಿದು ಢಾಬಾಕ್ಕೆ ಬಂದರು. ಮೀನಿನ ಚೀಲವನ್ನು ಕೆಲಸದವರ ಕೈಗೆ ಕೊಟ್ಟ ಮುತ್ತುಚಾಂಡಿ ಸ್ವಲ್ಪ ಹೊತ್ತಿನಲ್ಲಿಯೇ ಹಿಂತಿರುಗುವುದಾಗಿ ಹೇಳಿ ಪಾಂಬುವನ್ನು ಕರೆದ.

ಇಬ್ಬರೂ ಕಾರನ್ನೇರಬೇಕೆನ್ನುವಷ್ಟರಲ್ಲಿ ಪೊಲೀಸ್ ಜೀಪು ಢಾಬಾದ ಎದುರು ನಿಲ್ಲುವುದು ಕಂಡಿತು.

* * *

ಪೊಲೀಸ್ ಜೀಪಿನ ಒಳಗೆ ಇನ್ಸ್‌ಪೆಕ್ಟರ್ ರಾಜಧಾನಿ ಗಂಭೀರವಾಗಿ ಕುಳಿತಿದ್ದ. ಡ್ರೈವರ್ ಸೀಟ್ ಹಿಡಿದಿದ್ದ ಪಿಸಿ ಸಾರಂಗ ಜೀಪಿನಿಂದ ಇಳಿದು ಚಾಲನೆಗೆ ಬಂದ ಪಾಂಬುವಿನ ಕಾರಿನ ಬಳಿ ಬಂದು ಕೈ ತೋರಿಸಿದ.

ಪಿಸಿಯ ಸಂಜ್ಞೆಯನ್ನು ಮೀರುವಂತಿರಲಿಲ್ಲ. ಮುತ್ತುಚಾಂಡಿ ಕಾರಿನಿಂದ ಇಳಿದು ಹೊರಗೆ ಬಂದು ನಗು ಮುಖದಿಂದ ಪಿಸಿಗೆ ವಂದಿಸಿದ. ಪಾಂಬುವಿನ ಮುಖ ಮಾತ್ರ ಆಘಾತ ತಟ್ಟಿದವರಂತೆ ಕಪ್ಪಗಾಗಿತ್ತು.

‘ಬನ್ನಿ, ಇನ್ಸ್‌ಪೆಕ್ಟರ್ ಸಾಹೇಬ್ರು ನಿಮ್ಮನ್ನು ಕರೀತಾರೆ’ ಕಾರಿನ ಒಳಗೆ ಇಣುಕು ಹಾಕಿ ಕರೆದ. ಮುತ್ತುಚಾಂಡಿಯಂತೆ ಪಾಂಬುವಿಗೂ ಪಿಸಿ ಸಾರಂಗ ಯಾರನ್ನು ಕರೆಯುತ್ತಿದ್ದಾನೆನ್ನುವುದು ತಿಳಿಯಲಿಲ್ಲ. ಪಾಂಬು ಅಳುಕುತ್ತಲೇ ಕಾರಿನಿಂದ ಇಳಿದ.

ಇನ್ಸ್‌ಪೆಕ್ಟರ್ ನ ಮುಖ ಇನ್ನಷ್ಟು ಗಂಭೀರವಾಗಿರುವುದನ್ನು ಕಂಡು ಪಾಂಬುವಿನಂತೆ ಮುತ್ತುಚಾಂಡಿಯೂ ಬೆವರಿದ. ಕಣ್ಣಿಗೆ ಕಪ್ಪು ಗಾಜುಗಳನ್ನು ಧರಿಸಿ ಎತ್ತಲೋ ದೃಷ್ಟಿಸುತ್ತಾ ಕುಳಿತಿದ್ದ ಇನ್ಸ್‌ಪೆಕ್ಟರನ್ನು ಮೆತ್ತಗೆ ಕರೆದ ಮುತ್ತುಚಾಂಡಿ.

‘ಸಾರ್, ನಮಸ್ಕಾರ’

ಮುತ್ತುಚಾಂಡಿಯ ಗೌರವಕ್ಕೆ ದೃಷ್ಟಿ ಕದಲಿಸದೆ ಕುಳಿತಲ್ಲಿಂದಲೆ ತಲೆಯಲುಗಿಸಿದ ಇನ್ಸ್‌ಪೆಕ್ಟರ್ ಪ್ರಶ್ನೆ ಹಾಕಿದ.

‘ಪಾಂಬು ಎಲ್ಲಿ? ನಿನ್ನೆ ದಿನ ಅವನಿಗೆ ಏನಾಗಿತ್ತು?’

ಮುತ್ತುಚಾಂಡಿಗೆ ವಿಷಯ ತಿಳಿದಿಲ್ಲ. ಅವನು ಹಿಂದೆ ಮುದುರಿಕೊಂಡು ನಿಂತಿದ್ದ ಪಾಂಬುವನ್ನು ಓರೆ ಕಣ್ಣಿನಿಂದ ನೋಡುತ್ತಾ ನಿಂತ.

‘ಸಾರ್, ನಾನು ಇಲ್ಲಿದ್ದೀನಿ’ ಆಳದಿಂದ ಬಂದಂತಿತ್ತು ಮಾತು. ಇನ್ಸ್‌ಪೆಕ್ಟರ್ ಆ ದನಿಯನ್ನು ಕೇಳಿ ಪರೀಕ್ಷಾ ದೃಷ್ಟಿ ಬೀರುವಂತೆ ಕತ್ತನ್ನು ತಿರುಗಿಸಿ ಪಾಂಬುವನ್ನು ನೋಡಿದ. ಆ ನೋಟಕ್ಕೆ ಪಾಂಬು ಕುಸಿದು ಬೀಳಲಿದ್ದ.

‘ಸಾಹೇಬ್ರು ನಿನ್ನ ಪ್ರಶ್ನಿಸ್ತಿದ್ದಾರೆ, ನಿನ್ನೆ ದಿನ ನಿನಗೆ ಏನಾಗಿತ್ತೂಂತ?’ ತನಗೂ ತಿಳಿಯದ ಉತ್ತರವನ್ನು ಪಾಂಬುವಿನ ಬಾಯಿಯಿಂದಲೇ ಕೇಳುವ ಕಾತುರ ಮುತ್ತುಚಾಂಡಿಗೆ. ಅದಕ್ಕಾಗಿ ಅಧಿಕಾರಿ ಪುನರುಚ್ಚರಿಸಬಹುದಾದ ಪ್ರಶ್ನೆಯನ್ನು ಅವನೇ ಪಾಂಬುವಿಗೆಸೆದ.

ಪಾಂಬುವಿನ ತಲೆ ಖಾಲಿಯಾಗಿತ್ತು. ಹಿಂದಿನ ದಿನ ಏರು ಮಧ್ಯಾಹ್ನದ ಹೊತ್ತು ಬಂಡೆಗೆ ಹೋಗಿದ್ದವನು ಮೆದುಳು ಕೆಟ್ಟು ಹೋಗುವಷ್ಟು ಕುಡಿದಿದ್ದ. ಕುಡಿದ ಮತ್ತಿನಲ್ಲಿ ಪೊಲೀಸ್ ಅಧಿಕಾರಿ ಹಾಕಿದ ಪ್ರಶ್ನೆಗಳಿಗೆ ಏನು ಉತ್ತರಿಸಿದನೆನ್ನುವುದು ಕೂಡ ತಿಳಿದಿರಲಿಲ್ಲ. ಮತ್ತು ಇಳಿದ ಮೇಲೆ ತಲೆ ಕೆಟ್ಟವರಂತೆ ಅತ್ತಿದ್ದ.

‘ಕ್ಷಮಿಸ್ಬೇಕು ಸಾಹೇಬ್ರು. ನಿನ್ನೆ ದಿನ ವಿಪರೀತ ಕುಡ್ದು ಬಿಟ್ಟೆ. ಆ ಕಾಕುಟ್ಟ ಬೇರೆ ಊರಲಿರಲಿಲ್ಲ. ನನ್ನ ತಲೆ ಕೆಡುವುದಕ್ಕೆ ಅವನೇ ಕಾರಣ’

ಪೊಲೀಸ್ ಅಧಿಕಾರಿ ಕಪ್ಪು ಗಾಜಿನೊಳಗಿನಿಂದ ಪಾಂಬುವಿನ ಮುಖದಲ್ಲಾದ ಬದಲಾವಣೆಯನ್ನು ಗಮನಿಸಿದ. ಅವನ ಮುಖದಲ್ಲಾಗುತ್ತಿರುವ ಬದಲಾಣೇಯಲ್ಲಿ ಪಶ್ಚಾತ್ತಾಪದ ಛಾಯೆ ದಟ್ಟವಾಗಿತ್ತು. ಸತ್ಯವನ್ನು ಹೇಳಿ ನಾಲಿಗೆ, ಹೆಸರೂ ಎರಡನ್ನೂ ಕೆಡಿಸಿಕೊಂಡಿದ್ದ.

‘ನಿನ್ನ ಮಾತು ನಿಜ. ನಿನ್ನ ಅಕಲ್ ಕೆಟ್ಟು ಹೋಗಿತ್ತು. ಬೇರೆಯವರನ್ನ ಯಾಕೆ ಬೆರಳು ತೋರಿಸಿ ಆಡಿಕೊಳ್ಳುತ್ತೀಯಾ? ನೀನು ಕುಡಿದು ಲೇಲೇ ಹಾಕಿದ್ದಕ್ಕೂ ಕಾಕುಟ್ಟ ಊರಲ್ಲಿಲ್ಲದಕ್ಕೂ ಏನು ಸಂಬಂಧ?’

ನಾಲಗೆ ಸುಳ್ಳುಗಳ್ಳನ್ನಾಡಿ ಸತ್ಯಕ್ಕೆ ತಿರುಚಿಕೊಳ್ಳಲು ಸಾಧ್ಯವಾಗಲಿಲ್ಲ. ಪಾಂಬು ಮುತ್ತುಚಾಂಡಿಯನ್ನು ನೋಡಿದ. ಉದ್ದೇಶಪೂರ್ವಕ ವಾಗಿಯೋ, ಅವನಿಗೆ ಅರಿವಿಲ್ಲದೆಯೋ ಕಾಕುಟ್ಟನ ಹೆಸರು ನಾಲಗೆಯ ತುದಿಯಿಂದ ಜಾರಿತು. ಆ ಸತ್ಯವನ್ನು ಮರೆಮಾಚುವಂತಿಲ್ಲ. ಕಾಕುಟ್ಟ ಹಾಗೂ ತನ್ನ ಸಂಬಂಧವೇನು ಅನ್ನುವುದನ್ನು ಅಧಿಕಾರಿಗೆ ತಿಳಿಸಬೇಕು.

ಪಾಂಬುವಿನ ಮೌನಕ್ಕೆ ಪಿಸಿ ಸಾರಂಗ ಬಾಯಿ ಹಚ್ಚಿದ.

‘ಸಾಹೇಬ್ರು ಕೇಳೋ ಪ್ರಶ್ನೆಗೆ ನೀನು ಉತ್ತರಿಸ್ತಿಲ್ಲ’ ಎಚ್ಚರಿಕೆಯ ಪದಗಳು ಹೊರಳಿದಾಗ ಪಾಂಬು ಬಾಯಿ ತೆರೆದ.

‘ಸಂಬಂಧ ಇದೆ. ಇಲ್ಲಿ ನಡೆದಿರೋದನ್ನೆಲ್ಲಾ ನಾನು ಕಾಕುಟ್ಟನಿಗೆ ಹೇಳಿದ್ದೀನಿ. ಅದಕ್ಕೆ ಅವನು ರಾತ್ರೋ ರಾತ್ರಿ ಹೈದರಾಬಾದ್‌ಗೆ ಹೋಗುವ ನಿರ್ಣಯ ತೆಗೆದುಕೊಂಡಿದ್ದಾನೆ. ಇದರಲ್ಲಿ ನನ್ನ ತಪ್ಪೇನಿಲ್ಲ’

ಪಾಂಬುವಿನ ಮಾತು ಅರ್ಥವಾಗದೆ ಇನ್ಸ್‌ಪೆಕ್ಟರ್ ರಾಜಧಾನಿ ಪಿಸಿಯನ್ನು ಕರೆದ.

‘ಹೇಳಿಕೆಗಳು ಬದಲಾಗ್ತಾ ಇವೆ. ನಿನ್ನೆ ಈ ವಿಷಯ ನಮಗೆ ತಿಳಿಸ್ಲಿಲ್ಲ ಅವನು. ಆ ಫೈಲ್ ಈ ಕಡೆ ಕೊಡು’

ಪಿಸಿ ಸಾರಂಗ ತನ್ನ ಸೀಟ್‌ನ ಪಕ್ಕದಲ್ಲಿದ್ದ ಲಹರಿಯ ಫೈಲನ್ನು ತೆಗೆದು ಅಧಿಕಾರಿಯ ಕೈಯಲ್ಲಿಟ್ಟ. ಅಧಿಕಾರಿ ಗೊಣಗಿಕೊಂಡಿದ್ದು ಮುತ್ತುಚಾಂಡಿಗಾಗಲಿ, ಪಾಂಬುವಿಗಾಗಲಿ ತಿಳಿಯಲಿಲ್ಲ.

ಪೊಲೀಸ್ ಅಧಿಕಾರಿ ಫೈಲ್ನೊಳಗೆ ಮುಳುಗಿದಾಗ ಪಾಂಬು ಮುತ್ತುಚಾಂಡಿಯನ್ನು ಮೆಲ್ಲಗೆ ಕರೆದು ಹೇಳಿದ.

## ಏನಾದರೂ ಹೇಳಿ

ಅದೆಷ್ಟು ದಿನಗಳಾದವು
ಮನ ಮಿಡಿಯುವ ಮಧುರ ಮಾತು ಕೇಳಿ
ಹೃದಯ ಕೊಳವಿದು ಪ್ರಶಾಂತ
ತಾವರೆಯೊಂದರಳುವಂತೆ ಏನಾದರೂ ಹೇಳಿ

★ **ಸಂತೆಬೆನ್ನೂರು ಫೈಜ್ನಟ್ರಾಜ್**

